ಇದೆಲ್ಲವೂ ಮುಗಿದ ಮೇಲೆ ಮರಳಿ ಎಲ್ಲರೂ ಅರೆವಾದ್ಯ ಮತ್ತು ದಾಸರ ಸಮೇತ ಜುಂಜಪ್ಪನ ಗುಡಿ ಮುಂದಕ್ಕೆ ಮೆರವಣಿಗೆಯಲ್ಲಿ ಬಂದರು. ಅಷ್ಟು ಹೊತ್ತಿಗಾಗಲೇ ಮಧ್ಯಾಹ್ನ ಎರಡು ಗಂಟೆ ಸರಿದಿತ್ತು! ಗುಡಿಯ ಮುಂದೆ ಹಟ್ಟಿಯ ಈ ಮೂರೂ ಗುಂಪಿನವರು ತಮ್ಮ ತಮ್ಮ ಪೂಜಾರಪ್ಪ ಮತ್ತು ದಾಸರ ನೇತೃತ್ವದಲ್ಲಿ ಮೂಡಲು ದಿಕ್ಕಿಗೆ ನಿಂತು ಜಾಡಿ ಹಾಸಿ ಬಿಲ್ಗೂಡು ಮಾಡಿ, ಬವನಾಸಿ ಮತ್ತು ಜಾಗಟೆ ಇಟ್ಟು ಇದೇ ಬಗೆಯಾಗಿ ಕೊನೆಯ ಪೂಜೆ ಮುಗಿಸಿದರು. ಮತ್ತೆ ಅದೇ ರೀತಿ ಕರಿಕಂಬಳಿ ಮೇಲೆ ಬವವಾಸಿ ಇಟ್ಟು ಮಣೇವನ್ನು ಹಾಕಿದರು. ಪೂಜಾರಪ್ಪಗಳು ಮಣೇವು ಮುಗಿಸಿದ ಮೇಲೆ ಮುಂದಿನದನ್ನು ಅಣಿಮಾಡಲು ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಧಾವಂತದಿಂದ ತೆರಳಿದರು. ಇಲ್ಲಿಗೆ ಮೂಡ್ಲು ಮಣೇವು ಆಚರಣೆ ಕೊನೆಗೊಂಡಿತು. ಜುಂಜಪ್ಪನ ಪೌಳಿಯ ಮುಂದೆ ನೆರೆದಿದ್ದ ಪ್ರತಿಯೊಬ್ಬರ ಪ್ರಾರ್ಥನೆಯೂ ಸಾಮೂಹಿಕ ಒಳಿತಿಗಾಗಿಯೇ ಇತ್ತು. ಹಟ್ಟಿಯ ಮುಗ್ಧ ಜಗತ್ತು ಇಷ್ಟು ಸುಂದರವಾಗಿರಲು ಇದೇ ಕಾರಣ ಎಂದು ನನ್ನ ಮನಸ್ಸು ಹೇಳಿತು. ಇದೊಂದು ಕೃತ್ರಿಮಗಳಿಲ್ಲದ ದೇವರೇ ಸೃಷ್ಟಿಸಿದ ಜಗತ್ತು. ನಂತರ ದಾಸಪ್ಪದಿರು ಹಟ್ಟಿಯ ಪ್ರತಿಮನೆಗೂ ಹೋಗಿ ಅಲ್ಲಿ ಪೂಜಿಸಿದ ಎಡೆಯ ಮುಂದೆ ಜಾಗಟೆ ಬಡಿದು, ಗೋವಿಂದನನ್ನು ಜಪಿಸಿ, ಎಡೆ ತೀರಿಸಿದರು. ಹೀಗೆ ಪ್ರತಿ ಮನೆಯವರೂ ದಾಸಪ್ಪನನ್ನು ಕರೆದು ಇದೇ ರೀತಿ ಎಡೆ ತೀರಿಸಬೇಕು. ಇದಾದ ನಂತರವೇ ಎಲ್ಲರಿಗೂ ಬೆಲ್ಲದಹಾಲು ಮತ್ತು ಕುರಿತುಪ್ಪದ ಒಬ್ಬಟ್ಟಿನ ಊಟ!

ಎಲ್ಲವೂ ಒಂದು ಹಂತಕ್ಕೆ ಮುಗಿಯುವ ಹೊತ್ತಿಗೆ ಮೂರು ಗಂಟೆಯಾಗಿತ್ತು! ಹಟ್ಟಿಯ ಮೇಸ್ಟ್ರು ದಾಸಪ್ಪನವರ ಮಗ ನಾಗರಾಜು ಮತ್ತು ಪೂಜಾರ ಚಿತ್ತಯ್ಯನವರು ನಮ್ಮ ಬಳಿಗೆ ಬಂದು ಕೈಹಿಡಿದು ಊಟಕ್ಕೆ ಕರೆದರು. ಕರೆದರು ಎನ್ನುವುದಕ್ಕಿಂತ ಕೈಹಿಡಿದು ಎಳೆದರು ಎಂದು ಹೇಳುವುದೇ ಹೆಚ್ಚು ಸೂಕ್ತ. ಅಷ್ಟೊಂದು ಅಕ್ಕರೆ ತೋರಿದರು. ನಾವೂ ಕೂಡ ಅವರ ಪ್ರೀತಿಯ ಒತ್ತಾಯಕ್ಕೆ ಇಲ್ಲ ಎಂದು ಹೇಳಲಾಗದೆ ಅವರ ಹಿಂದೆ ಹೊರಟೆವು. ನನಗೆ ಊಟಕ್ಕಿಂತ ಮೊದಲು ಕುಡಿಯಲು ನೀರು ಬೇಕಾಗಿತ್ತು. ಆದ್ದರಿಂದ ಮೊದಲು ಅವರಿಂದ ಕೈ ಬಿಡಿಸಿಕೊಂಡು ಒಂದು ಚಂಬು ನೀರು ಕುಡಿದೆ. ಈಗ ನನಗೆ ಅವರೊಡನೆ ಮಾತನಾಡುವಷ್ಟು ಚೈತನ್ಯ ಬಂದಿತು. ನಾವು ಅವರೊಡನೆ ಹೊರಟ ನಂತರ, ನನ್ನ ದೃಷ್ಟಿ ಕುರಿರೊಪ್ಪದ ಕಡೆ ಹರಿಯಿತು. ಬೆಳಗ್ಗೆ ನಾನು ನೋಡಿದಾಗಿನಿಂದ ಕುಳಿತಿದ್ದ ಇಬ್ಬರು ಹಿರಿಯರ ಜೊತೆಗೆ ಇನ್ನಿಬ್ಬರು ಹಿರಿಯ ಮಹಿಳೆಯರೂ ಅಲ್ಲಿ ಕುಳಿತಿದ್ದರು. ನನಗೇಕೋ ಅವರೊಡನೆ ಮಾತನಾಡಬೇಕೆನಿಸಿತು. ನಾಗರಾಜು ಅವರಿಗೆ ಈ ಸಂಗತಿ ಹೇಳಿದೆ. ಇದಕ್ಕೆ ನಾಗರಾಜು ಮತ್ತು ಪೂಜಾರ ಚಿತ್ತಯ್ಯನವರು ಜೊತೆಯಾಗಿ ಮೊದಲು ಊಟ ಮುಗಿಸಿ, ನಂತರ ಬಂದು ಅವರೊಡನೆ ಮಾತನಾಡುವಿರಂತೆ. ಅವರು ಎಲ್ಲಿಯೂ ಹೋಗೋದಿಲ್ಲ. ನಮ್ಮ ಹಟ್ಟಿಯವರೇ ಎಂದು ಹೇಳಿದರು. ಆದರೆ ನನಗೇಕೋ ಮನಸ್ಸು ಒಪ್ಪಲಿಲ್ಲ! 'ಇಲ್ಲ ಅವರೊಡನೆ ಎರಡು ಮಾತನಾಡಿ ಹೋಗೋಣ' ಎಂದು ಹೇಳಿದೆ. ಅದಕ್ಕೆ ಅವರಿಬ್ಬರೂ ಆಯಿತು, ನಡೆಯಿರಿ ಎಂದು ಹಟ್ಟಿಯ ಹಿರಿಯರು ಕುಳಿತಿದ್ದ ಕುರಿರೊಪ್ಪದ ಕಡೆ ಬಂದೆವು.

ಅವರ ಬಳಿ ಬಂದ ಮೇಲೆ ನಾಗರಾಜು ಅವರೇ ಮುಂದಾಗಿ ಒಬ್ಬರ ಕಡೆ ಕೈ ತೋರಿಸಿ, 'ನೋಡಿ ಸ್ವಾಮಿ ಇವರು ಹಟ್ಟಿಯ ಹಿರೀಕ ದಾಸರ ಗೋವಿಂದಪ್ಪ ಅಂತ, ಇವರು ಪಟೇಲ್ ಕೃಷ್ಣಪ್ಪ ಗೌಡರು ಅಂತ. ನಮ್ಮ ಹಟ್ಟಿ ಗೌಡ್ಕೆ ಇವರ್ದೆ' ಎಂದು ಪರಿಚಯಿಸಿದರು. ಆಗಲೂ ಅಲ್ಲಿ ಕುಳಿತಿದ್ದ ಆ ಹಿರಿಯರ ಮುಖಗಳು ಯಾವ ಪ್ರತಿಕ್ರಿಯೆಯೂ ಇಲ್ಲದೆ ನಿರ್ಲಿಪ್ತವಾಗಿ ಇದ್ದುದನ್ನು ನೋಡಿದೆ. ನಾನು ಲೋಕಾಭಿರಾಮವಾಗಿ ಅವರಿಗೆ 'ಹಬ್ಬ ಆಯಿತೆ ಗೌಡ್ರೆ!' ಎಂದು ಕೇಳಿದೆ. ನಾನು ಹೀಗೆ ಅವರನ್ನು ಕುರಿತು ಮಾತನಾಡಿದ್ದು ಕುದಿಯುವ ಜ್ವಾಲಾಮುಖಿಯನ್ನೇ ಮಾತನಾಡಿಸಿದಂತಾಯಿತು! 'ಏನು ಹಬ್ಬಾನೋ ಏನೋ ಕಣಪ್ಪ, ಎಲ್ಲಾ ಸಲದಂಗೆ ಅಲ್ಲ ಈ ಸಲದ ಹಬ್ಬ' ಎಂದು ದಾಸರ ಗೋವಿಂದಪ್ಪ ಉತ್ಸಾಹರಹಿತರಾಗಿ ಹೇಳಿದರು. ನಾನು ಕುತೂಹಲದಿಂದ ಏಕೆ ಗೋವಿಂದಪ್ಪನವರೇ, ವರ್ಷಕ್ಕೊಂದು ಹಬ್ಬವಲ್ಲವೆ! ಅಂತದ್ದರಾಗೆ ಹಿಂಗೆ ಹೇಳುತ್ತಿದ್ದೀರಲ್ಲಾ! ಎಂದು ಕೇಳಿದೆ.

ಗೋವಿಂದಪ್ಪ ಅವರು, 'ಪ್ರತಿವರ್ಷ ಯುಗಾದಿ ಟೇಮಿನಾಗೆ ಸಿರಾ ಸಂತೆನಾಗೆ ನಮ್ಮ ಕುರಿಪಟ್ಲ ಮಾರಿ ಹಬ್ಬ ಮಾಡುತ್ತಿದ್ದೋ, ಇದರಿಂದ ನಾಲ್ಕು ಕಾಸೂ